CLAUSES 2 TO 9 AND SCHEDULE

MR DEPUTY SPEAKER.—These are no amendments. Therefore I will put all the clauses and the schedule to the vote of the House.

The question is:

"That clauses 2 to 9, both inclusive, and the schedule do stand part of the Bill."

The motion was adopted

Clauses 2 to 9 both inclusive and the schedule were added to the Bill.

CLAUSE 1 ETC

MR. DEPUTY SPEAKER.—Now I will put clause 1, etc., to the vote of the House.

The question is :

"That Clause, 1 the Long Title the Premble and the Enacting Formula do stand part of the Bill."

The motion was adopted

Clause 1, the Long Title, the Prembls and tho Enacting Formula were added to the Bill.

Motion to pass

SRI C, N. PATIL.—I moved :

"That the Payment of Wages (Karnataka Amandment) Bill, 1976 be passed."

MR. DEPUTY SPEAKER.—The question is :

"That the Payment of Wages (Karnataka Amendment) Bill, 1976 be passed."

Motion was adopted and the Bill was passed

Karnataka Labour Welfare Fund (Amendment) Bill 1976
Message from the Governor

MR. DEPUTY SPEAKER.—I have received recommendation of the Governor for consideration of the Karnataka Labour Welfare Fund (Amendment) Bill, 1976.

Motion to consider

SRI C. N. PATIL.—I move :

"That the Karnataka Labour Welfare Fund (Amendment) Bill, 1976 be taken into consideration."

MR. DEPUTY SPEAKER.—Motion moved.

"That the Karnataka Labour Welfare Fund (Amendment) Bill, 1976 be taken into consideration."

ಶ್ರೀ ಸಿ ಎನ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೆ, ಈ ಕರ್ನಾಟಕ ಕಾರ್ಮಿಕ ನಿಧಿ ಕಾಯಿದೆ ಮೊಟ್ಟ ಮೊದಲಿನಿಂದಲೂ ಅಂದರೆ 1965ರಿಂದಲೂ ಇದೆ. ಈ ಒಂದು ಕ್ಷೇಮ ನಿಧಿಗೆ 3 ವಿಧದಲ್ಲಿ ಹಣ ಸಂದಾಯ ವಾಗಬೇಕಾಗಿತ್ತು. (1) all fines realised from the employees, (2) all unpaid accumulations transferred to the funds (3) any voluntary donations. ಇವು ಬರದೆ ಈ ಕ್ಷೇಮ ನಿಧಿಗೆ ಬರಬೇಕಾದ ಹಣ ಬಹಳ ಕಡಿಮೆಯಾಗಿದೆ. ಮತ್ತು 1965ರಿಂದ ಇದುವರೆಗೂ ಕೂಡ ಸುಮಾರು 4-5 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಣ ಬರಲಿಲ್ಲ. ಆದಕ್ಕಾಗಿ ಈ ಒಂದು ಕ್ಷೇಮ ನಿಧಿಗೆ ಹೆಚ್ಚು ಹಣ ದೊರಕಿಸುವ ಉದ್ದೇಶದಿಂದ ಈ ಒಂದು ತಿದ್ದುಪಡಿಯನ್ನ್ನು ತಂದಿದ್ದೇವೆ. ಈ ಒಂದು ಕ್ಷೇಮ ನಿಧಿಗೆ ಪ್ರತಿಯೊಬ್ಬ ಕಾರ್ಮಿಕನಿಗೆ 1 ರೂಪಾಯಿ ಬಿದರೆ ಎಂಪ್ಲಾಯರ್ಸ್‌ನಿಂದ 2 ರೂಪಾಯಿ ಮತ್ತು ಸರ್ಕಾರದಿಂದಲೂ ಕೂಡ ಒಂದು ರೂಪಾಯಿ ಬರುತ್ತದೆ. ಈಗಾಗಲೇ ಎಲ್ಲಾ ಕಾರ್ಖಾನೆಗಳಲ್ಲಿರುವ ಕಾರ್ಮಿಕರ ಸಂಖ್ಯೆಗಳನ್ನು ನೋಡಿದರೆ 5½ ಲಕ್ಷ ಇದೆ. ಈ ರೀತಿಯಾಗಿ ಅವರು ಈ ಒಂದು ನಿಧಿಗೆ ಕೊಟ್ಟರೆ ಸುಮಾರು 20ರಿಂದ 25 ಲಕ್ಷ ರೂಪಾಯಿಗಳಷ್ಟು ಹಣ ದೊರೆಯುತ್ತದೆ. ಈ ಒಂದು ಉದ್ದೇಶದಿಂದ ಈ ಒಂದು ನಿಧಿಗೆ ಹೆಚ್ಚು ದೊರಕಿಸಿ ಹಣ ಕೊಳ್ಳುವ ಉದ್ದೇಶದಿಂದ ಇದನ್ನು ತಂದಿದ್ದಾಗಿದೆ. ಅಲ್ಲದೆ ಯಾವನೇ ಒಬ್ಬ ಕಾರ್ಮಿಕ ಕೆಲಸದಲ್ಲಿದ್ದಾಗ ಅವನು ಸಾವನ್ನಪ್ಪಿದರೆ ಅಗಲಿ ಅಥವಾ ಇತರ ಯಾವುದೇ ಆಕ್ಸಿಡೆಂಟ್ ಆಗಲಿ ಆದರೆ ಆತನ ಕುಟುಂಬಕ್ಕೆ ಒಂದು ಯಾವುದಾದರೂ ನೋವು ಬಂದಾಗ ಈ ಒಂದು ಕ್ಷೇಮ ನಿಧಿಯ ಲಾಭ ಆ ಕಾರ್ಮಿಕನಿಗೆ ಅಥವಾ ಆತನ ಕುಟುಂಬ ವರ್ಗದ ಸದಸ್ಯರಿಗೆ ದೊರಕಿಸಿಕೊಡುವ ಉದ್ದೇಶದಿಂದ ಈ ಒಂದು ನಿಧಿಯನ್ನು ರೂಢಿಸಬೇಕು ಅನ್ನುವ ಒಂದು ಸದುದ್ದೇಶದಿಂದ ಸರ್ಕಾರ ಈ ಒಂದು ತಿದ್ದುಪಡಿಯನ್ನು ತಂದಿದೆ. ಈ ಬಗ್ಗೆ ಎಲ್ಲಾ ಕಾರಣಗಳನ್ನೂ ಕೂಡ ಈ ಸಭೆಯ ಮುಂದೆ ಇಟ್ಟಿದ್ದೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಇನ್ನು ಏನಾದರೂ ವಿಚಾರಗಳು ಇದ್ದರೆ ಹೇಳಬೇಕು. ಎಂದು ಹೇಳುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).— ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನ್ನು ಓದಿದ ಮೇಲೆ ಏನು ಅರ್ಥವಾಯಿತೆಂದರೆ, ಈ ಕಾರ್ಮಿಕ ಕಲ್ಯಾಣ ಫಂಡಿಗೆ ಮೂರು ಬಾಬುಗಳಿಂದ ಏನು ಹಣ ಸಿಗುತ್ತಿತ್ತು, ಆದು ಸಾಲದ ಕಾರಣ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆಂದು ತಿಳಿದು ಬಂತು. ಆ ಮೂರು ಬಾಬುಗಳು ಯಾವುವು ಎಂದರೆ:

(a) all fines realised from the employees :

(b) all unpaid accumulations transferred to the funds and.

(c) any voluntary donations.

ಈ ಮೂಲಕಗಳಿಂದ ಬರುತ್ತಿದ್ದ ಹಣ ಸಾಲದ ಕಾರಣ ಈ ತಿದ್ದುಪಡಿ ಮಸೂದೆಯನ್ನು ತರ ಬೇಕಾಯಿತೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಕಾಯಿದೆಯನ್ನು ಓಬಿರಾಯನ ಕಾಲದಲ್ಲಿ ಮಾಡಿದ್ದು. ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕರಿಗೆ ಫೈನ್ ಹಾಕಿದ ದುಡ್ಡು ಉಪಯೋಗಿಸುವ ಮನೋವೈಪರೀತ್ಯ ಸರ್ಕಾರದ ತತ್ವಹೀನ ದಿವಾಳಕೋರತನ ಎತ್ತಿ ತೋರಿಸುತ್ತದೆ. ಮತ್ತು ಕಾರ್ಮಿಕರಿಗೆ ಫೈನ್ ಹಾಕಿದ ಮೇಲೆ ಅಂತಹ ಹಣವನ್ನು ಈ ಫಂಡಿಗೆ ಅನೇಕ ಜನ ಮಾಲಿಕರು ವರ್ಗಾವಣೆ ಮಾಡಿಲ್ಲ. ಆ ರೀತಿ ವರ್ಗಾವಣೆ ಮಾಡಿದವರ ಬಗ್ಗೆ ಮೀಸಾ ಪ್ರಕಾರ ಸರ್ಕಾರ ಏತಕ್ಕೆ ಕ್ರಮ ತೆಗೆದು

ಕೊಳ್ಳಲಿಲ್ಲ ಎಂದು ನಾನು ಕೇಳುತ್ತೇನೆ ? . ಇಂತಹ ಹಣ ಬೇಕಾದಷ್ಟು ಇರುತ್ತದೆ. ಆದರೆ ಆ ಹಣವನ್ನು ಅವರು ಫಂಡಿಗೆ ಕೊಡುತ್ತಿಲ್ಲ ಕಾರ್ಮಿಕರ ಯೋಗ ಕ್ಷೇಮ ಸರ್ಕಾರದ ಕರ್ತವ್ಯವೆಂದು ಭಾವಿಸದೆ ಜಂಲ್ಮಾನಿಗಳಿಂದ ಪಡೆದ ದುಡ್ಡು ಹಾಗೂ ಡೊನೇಷನ್‌ಗಳಿಂದ ಪಡೆದ ದುಡ್ಡು ಉಪಯೋಗಿಸುವ ಪರಂಪರೆ ತತ್ವಹೀನ ಪರಂಪರೆ. ಅವರಂಗಳು ಸರಿಯಾಗಿ ಈ ಬಗ್ಗೆ ಲೆಕ್ಕ ಕೊಡದೆ ಕೋಟಿಗಟ್ಟಲೆ ಹಣ ಸಂಪಾದನೆ ಮಾಡುತ್ತಿದ್ದಾರೆ. ಮತ್ತು ಅಂತಹ ಹಣವನ್ನು ಬ್ಲಾಕ್–ಮನಿಯಾಗಿ ಇಡುತ್ತಿದ್ದಾರೆ. ಅದಕ್ಕೆ ಅವರು ಟ್ಯಾಕ್ಸ್ ಸಹ ಕೊಡುತ್ತಿಲ್ಲ. ಬೆವರು ಮತ್ತು ರಕ್ತವನ್ನು ಸುರಿಸಿ ದುಡಿಯತಕ್ಕಂಥ ಕಾರ್ಮಿಕರು ಈ ಫಂಡಿಗೆ ಒಂದು ರೂಪಾಯಿ ಕೊಟ್ಟರೆ, ಮಾಲೀಕರು ಕೇವಲ ಎರಡು ರೂ. ಗಳನ್ನು ಕೊಡಬೇಕೆಂದು ಹೇಳಿರುವುದು ಸರಿಯಲ್ಲ ; ಸರ್ಕಾರದವರು ಒಂದು ರೂ. ಗೆ ಬದಲು ಎರಡು ರೂ. ಗಳನ್ನು ಕೊಟ್ಟರೆ ಪರವಾಗಿಲ್ಲ ; ಆದರೆ ಮಾಲೀಕರು ಮಾತ್ರ ವರ್ಷಕ್ಕೆ ೨ರೂ. ಗಳಿಗೆ ಬದಲು ೩ಗಳೊಂದಕ್ಕೆ ಒಂದು ರೂಪಾಯಂತೆ ಈ ನಿಧಿಗೆ ಮಾಲೀಕರಿಂದ ಹಣ ಕೊಡಿಸಬೇಕು. ಈ ಸಲಹೆಗೆ ಸರ್ಕಾರ ಒಪ್ಪದೆ ಇದ್ದಲ್ಲಿ ಕನಿಷ್ಟ ವರ್ಷಕ್ಕೆ ೫ ರೂ. ಗಳನ್ನು ಕೊಡುವಂತೆ ತಿದ್ದುಪಡಿ ಮಾಡಬೇಕಾಗಿತ್ತು.- ಈ ಒಂದು ತಿದ್ದುಪಡಿಯನ್ನು ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳೇ ಸೂಚನೆ ಮಾಡಬೇಕೆಂದು ಹೇಳುತ್ತೇನೆ, ಈ ರೀತಿ ಮಾಡದಿದ್ದರೆ ಸಮಾಜವಾದವನ್ನು ಹೇಳಿಕೊಳ್ಳುವಂತಹ ರೀತಿಯಲ್ಲಿ ಯಾವ ಕಾರ್ಯಕ್ರಮವೂ ಜಾರಿಗೆ ತರುವುದಕ್ಕಾಗುವುದಿಲ್ಲ. ಇದು ವೆಲ್‌ಫೇರ್ ಸ್ಟೇಟ್, ಸೋಷಿಯಲಿಸ್ಟಿಕ್ ಸ್ಟೇಟ್ ಎಂದು ಹೇಳುವಾಗ, ಕಾರ್ಮಿಕರ ವೆಲ್ ಫೇರ್ ಸಲುವಾಗಿ ಮಾಲೀಕರು ಹೆಚ್ಚು ಹಣ ಕೊಡುವುದು ನ್ಯಾಯವಿದೆ ಆದಕಾರಣ ಸರ್ಕಾರ ಈ ಬಗ್ಗೆ ಒಂದು ತಿದ್ದುಪಡಿ ತರಬೇಕೆಂದು ಹೇಳುತ್ತೇನೆ. ಆ ರೀತಿ ಮಾಡದಿದ್ದರೆ ಸರ್ಕಾರ ಕಾರ್ಮಿಕರ ವಿಚಾರದಲ್ಲಿ ಕೇವಲ ಲಿಪ್ ಸಿಂಪಥಿ ತೋರಿಸುತ್ತಿದೆ ಎಂದು ಹೇಳಬೇಕಾಗುತ್ತದೆ.

† ಸಿ. ಎನ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈ ಸದನದ ಸದಸ್ಯರಾದ ಶ್ರೀಮಾನ್ ವಿ.ಎನ್. ಪಾಟೀಲರು ಸರ್ಕಾರದವರು ತಂದಿರತಕ್ಕಂಥ ಈ ಒಂದು ತಿದ್ದುಪಡಿ ಮಸೂದೆಯನ್ನು ಸ್ವಾಗತ ಮಾಡುತ್ತಾ, ಇದನ್ನು ಇನ್ನೂ ಹೆಚ್ಚು ಮಾಡಬೇಕಾಗಿತ್ತು ಎಂಬ ವಿಚಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅವರು ಏನು ಸೂಚನೆ ಮಾಡಿದ್ದಾರೆ, ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆಂದು ಹೇಳಿ ಅವರು ಮಾಲೀಕರಿಂದ ೫ ರೂಪಾಯಿಗಳನ್ನು ತೆಗೆದು ಕೊಳ್ಳಬೇಕು, ಸರ್ಕಾರದವರು ೨ ರೂಪಾಯಿಗಳನ್ನು ಕೊಡಬೇಕು ಮತ್ತು ಕಾರ್ಮಿಕರಿಂದ ಒಂದು ರೂ ಮಾತ್ರ ತೆಗೆದುಕೊಳ್ಳಬೇಕೆಂದು ಏನು ಸಲಹೆ ಮಾಡಿದ್ದಾರೆ, ಅದೂ ಕೂಡ ತುಂಬಾ ಕಡಿಮೆ ಅನ್ನುವಂತಹ ಒಂದು ಕಾಲ ಬರಬಹುದು. ಏಕೆಂದರೆ ಈ ರಾಜ್ಯದಲ್ಲಿ ಐದೂವರೆ ಲಕ್ಷ ಕಾರ್ಮಿಕರಿದ್ದಾರೆ. ಇವರ ಕ್ಷೇಮನಿಧಿಗಾಗಿ ೨೦ ರಿಂದ ೨೫ ಲಕ್ಷ ರೂಪಾಯಿಗಳನ್ನು ಏನಾ ದೊರಕಿಸಿ ಕೊಳ್ಳುತ್ತಿದ್ದೆವೆ ಅದೂ ಕೂಡ ಬಹಳ ಕಡಿಮೆ ಎಂದೂ ಹೇಳಬಹುದು. ಆದರೆ ಇದು ಒಂದು ಹೊಸ ಅನುಭವವಾಗಿದೆ. ಇದರ ಒಂದು ಅನುಭವವನ್ನು ಒಂದು ವರ್ಷದವರೆಗೆ ನೋಡಿಕೊಂಡು ಆನಂತರ ಕಾರ್ಖಾನೆ ಮಾಲೀಕರಿಂದ ಕೇವಲ ೫ ರೂಪಾಯಿಗಳು ಮಾತ್ರವಲ್ಲ, ತಿಂಗಳಿಗೆ ಒಂದು ರೂ. ನಂತೆ ಏಕೆ ವಸೂಲಿ ಮಾಡಬಾರದೆನ್ನುವ ವಿಚಾರವನ್ನೂ ಸಹ ನಾವು ಹೊಂದಿದ್ದೇನೆ. ಈ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರಿಗಳು ಏನಿವೆ, ಭದ್ರಾವತಿ ಕಬ್ಬಿಣ ಕಾರ್ಖಾನೆಯೇ ಆಗಲೀ ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿಯೇ ಆಗಲೀ, ಹಿಂದೂಸ್ತಾನ್ ಏರೋನಾಟಿಕ್ಸ್ ಆಗಲೀ, ಹಿಂದೂಸ್ತಾನ್ ಮಿಷಿನ್ ಟೂಲ್ಸ್ ಆಗಲೀ ಇವುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಕ್ಷೇಮ ನಿಧಿಗೆ ಹಣವನ್ನು ಹೆಚ್ಚು ಕೂಡಿಸುವ ಬಗ್ಗೆ ಮಾನ್ಯ ಸದಸ್ಯರು ಏನು ಅಭಿಪ್ರಾಯ ಸೂಚನೆ ಮಾಡಿದ್ದಾರೆ, ಅದರಂತೆ ಮುಂದೊಂದು ತಿದ್ದುಪಡಿಯನ್ನು ತರತಕ್ಕಂಥ ಅವಶ್ಯಕತೆ ಬರಬಹುದು. ಅಂತಹ ಯೋಗ್ಯ ಕಾಲ ಬಂದಾಗ ಮತ್ತೊಂದು ತಿದ್ದುಪಡಿ ತರುತ್ತೇವೆಂದು ಹೇಳಿ ನನ್ನ ಉತ್ತರವನ್ನು ಮುಗಿಸುತ್ತೇನೆ.

MR. DEPUTY SPEAKER.— The question is .—

"That the Karnataka Labour Welfare Fund (Amendment) Bill 1976 be taken into consideration."

The motion was adopted

Clauses 2 to 6

MR. DEPUTY SPEAKER.—The question is .—

" That Clauses 2 to 6, both inclusive, do stand part of the Bill "

The motion was adopted

Clauses 2 to 6, both inclusive, were added to the Bill.

Clause 1, ETC

MR. DEPUTY SPEAKER.— The question is.—

"That Clause I, the long Tittle the Preamble and the Enacting Formula do stand part of the Bill. "

The motion was adopted

Clause I, the Long Title the Preamble and Enacting Formula were added to the Bill.

Motion to pass

SRI. C. N. PATIL (Minister for Labour) .— Sir, I move :

That the Karnataka Labour Welfare Fund (Amendment) Bill, 1976, be passed. "

MR. DEPUTY SPEAKER.— The question is .—

"That the Karnataka Labour Welfare Fund (Amendment) Bill, 1976 be passed. "

The motion was adopted and the Bill was passed.

Karnataka Preservation of Trees Bill 1976
Message from the Governor

MR. DEPUTY SPEAKER.—I have received the recommendation of the Governor for the consideration of the Karnataka Preservation of Trees Bill, 1976.

motion to consider

SRI H, C. SRIKANTAIAH (Minister of State for Forests).— Sir, I beg to move :

" That the Karnataka Preservation of Trees Bill, 1976, be taken into consideration. "